ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ (ರಿ), ದಾವಣಗೆರೆ.

ಸ್ಥಾಪನೆ- 1962

# ವಿದ್ಯಾವರಣ

ವಿಶೇಷ ಪುರವಣಿ ಮಕ್ಕಳ ಮಾಸಪತ್ರಿಕೆ

ದಿನಾಂಕ : 14/12/2025 : www.sjjes.ac.in : info@sjjes.ac.in : +91.8192.277698

## ಸಂಸ್ಥಾಪಕ ಅಧ್ಯಕ್ಷರ ನಡೆ, ನುಡಿಯಲ್ಲಿಯೇ ಸಂಸ್ಕಾರದ ಛಾಯೆ ವೀರಭದ್ರಪ್ಪ ಎಂ ಚಿಗಟೇರಿಯವರು ಒಂದು ನೆನಪು.



ಒಮ್ಮೆ ಬಹುಶಃ 1980/1981ರ ಕಾಲಘಟ್ಟ ಇರಬಹುದು. ನಮ್ಮ ಸಹೋದರ ಶಾಲೆ SJJMHS ತರಗತಿಗಳು ಇಂದಿನ ಶಿವಯೋಗಾಶ್ರಮದ ಹಿಂಭಾಗದ ಕೊಠಡಿಗಳಲ್ಲಿ ನಡೆಯುತ್ತಿತ್ತು. ಆಗ ಕಂಬೈನ್ಡ್ ಕ್ಲಾಸ್ ಮಾಡಲು ಆಗುತ್ತಿರಲಿಲ್ಲ. ವಿದ್ಯಾರ್ಥಿಗಳಿಗೆ ಶಾಲೆಗೆ ಚಕ್ಕರ್ ಹಾಕುವ ಮನಸ್ಥಿತಿ ಅಥವಾ ಧೈರ್ಯವೂ ಇಲ್ಲ. ಕ್ಲಾಸ್ ಕಂಬೈನ್ಡ್ ಆದರೆ, 15 - 20 ವಿದ್ಯಾರ್ಥಿಗಳು ತರಗತಿಯಿಂದ ಹೊರಗೆ, ಕಾರಿಡಾರಿನಲ್ಲಿ ಕುಳಿತು ಪಾಠ ಕೇಳಿಸಿಕೊಳ್ಳುತ್ತಾ ಇದ್ದರು. SJJM ನಲ್ಲಿ ಅಂದಿನ ಮುಖ್ಯೋಪಾಧ್ಯಾಯರಾದ ಶ್ರೀ ಬಿದರಿಮಠ್ ರವರ ನಿವೃತ್ತಿಯ ದಿನ . ಸಂಜೆ ಬೀಳ್ಕೊಡುಗೆ ಕಾರ್ಯಕ್ರಮ ನಡೆಯುತ್ತಿತ್ತು. ವೇದಿಕೆ ಕಾರ್ಯಕ್ರಮ ಮುಗಿದು, ವಿದ್ಯಾರ್ಥಿಗಳು ಮನೆಗೆ ಹೋಗಿದ್ದರು. ಅಂದಿನ ಕಾರ್ಯಕ್ರಮದ ಕೊನೆಯ ಭಾಗ ಲಘು ಉಪಹಾರ ... ನಾವುಗಳೆಲ್ಲಾ ವೃತ್ತಾಕಾರವಾಗಿ ಕುಳಿತಿದ್ದೆವು. ವೃತ್ತದ ಒಂದು ಭಾಗದಲ್ಲಿ ಶ್ರೀಯುತ ವೀರಭದ್ರಪ್ಪನವರು (ಸಂಸ್ಥೆಯ ಅಧ್ಯಕ್ಷರು) ಆಡಳಿತ ಮಂಡಳಿಯ ಇತರ ಸದಸ್ಯರು ಆಸೀನರಾಗಿದ್ದರು. ಆಗ SJJM ಬಾಯ್ಸ್ ಹೈಸ್ಕೂಲ್ ನಲ್ಲಿಯ ಶಿಕ್ಷಕರಲ್ಲಿ ಗುಸುಗುಸು, ಸ್ವಲ್ಪ ಅಸಮಾಧಾನ, ಗುಂಪುಗಾರಿಕೆ, ಛಾಯೆ ಕಂಡು ಬರುತ್ತಿರುತ್ತದೆ. ಶಿಕ್ಷಕರ ಎದುರಿಗೆ ನಮ್ಮ ತಿಂಡಿ ದೋಸೆಯ ಪ್ಯಾಕೆಟ್ ಬಂದಿರುತ್ತದೆ. ನಾವು ನಮ್ಮ ಪ್ಯಾಕೆಟ್ ಓಪನ್ ಮಾಡುತ್ತಿದ್ದೆವು. ಆಗ ಪ್ರೆಸಿಡೆಂಟ್ ರವರು ಒಂದು (ಅನೌನ್ಸಮೆಂಟ್) ಮಾತನ್ನು ಹೇಳಿದರು. ಯಾರೊಬ್ಬರಿಗೂ ಉದ್ದೇಶಿಸಿ ಹೇಳಲಿಲ್ಲ...ಇಲ್ಲಿ ಕೇಳಿ, " ನೀವೆಲ್ಲಾ ಶಿಕ್ಷಕರು, ಮಕ್ಕಳಿಗೆ ಅನ್ಯಾಯ ಮಾಡ್ಬೇಡಿ. ನಾವು ಯಾರಿಗೆ ಯಾವ ಜವಾಬ್ದಾರಿ ಕೊಡುತ್ತೇವೆಯೋ, ಆ ರೀತಿಯಲ್ಲಿಯೇ ಪರಸ್ಪರ ಹೊಂದಿಕೊಂಡು ಕೆಲಸ ಮುಂದುವರಿಸ ಬೇಕು " ( ಹೆಚ್ಚು ಕಡಿಮೆ ಇದೇ ಅರ್ಥ ಬರುವಂತೆ ಮಾತನಾಡಿರುತ್ತಾರೆ) ನೀವುಗಳು ಇಲ್ಲಿಗೆ ಬಂದಿರುವುದು ಮಕ್ಕಳಿಗೆ ಕಲಿಸಲು, ಎಂಬುದು ಮರೆಯಬೇಡಿ. ಎಲ್ಲರೂ

ಮಕ್ಕಳಿಗಾಗಿ ಒಟ್ಟಾಗಿ ಕೆಲಸ ಮಾಡುವಿರಿ ಎಂದಾದರೆ, ನಾನು ತಿಂಡಿ ತೆಗೆದುಕೊಳ್ಳುತ್ತೇನೆ ಎಂದರು. ಎಲ್ಲಾ ಶಿಕ್ಷಕರು ಒಟ್ಟಾಗಿ, ಎರಡು ಮಾತನಾಡದೇ ಆ ಮಾತಿಗೆ ಒಪ್ಪಿಕ್ಕೊಂಡು ಕೆಲಸ ಮುಂದುವರಿಸಿದ್ದರು. ಸರ್ ದೋಸೆ ಸ್ವೀಕರಿಸಿದರು. ಬಿರುಗಾಳಿಯಂತೆ ಕಂಡ ಸಮಸ್ಯೆ, ತಂಗಾಳಿಯಂತೆ ಹಾದು ಹೋದದ್ದು ಅಷ್ಟೇ ಸತ್ಯ!!!...... ಇಲ್ಲಿ ಮುಖ್ಯವಾಗಿ ಗಮನಿಸ ಬೇಕಾದ್ದುದು, ಶಿಕ್ಷಕರಲ್ಲಿಯ ಅಸಮಾಧಾನ, ಗುಂಪುಗಾರಿಕೆ ಹೆಸರಿಲ್ಲದಂತೆ ನಾಶವಾದುದು.

ಅಸಮಾಧಾನದ ಬೆಂಕಿ ಹತ್ತಿಕೊಂಡದ್ದು, ಅಲ್ಲಿಯೇ ಆರಿ ಬೂದಿಯಾಗಿ ಹೋಗಿದ್ದು..... ಇದೆಲ್ಲಾ ಸಾಧ್ಯವಾಗಿದ್ದು ಪ್ರೆಸಿಡೆಂಟ್ ಅವರ ಮಾತು... ನೀವೆಲ್ಲಾ ಶಿಕ್ಷಕರು (ಶಿಕ್ಷಕರ ಜವಾಬ್ದಾರಿ), ಮಕ್ಕಳಿಗೆ (ದೇವರಿಗೆ )ಅನ್ಯಾಯ ಮಾಡ್ಬೇಡಿ ಎನ್ನುತ್ತಾ ಶಿಕ್ಷಕರುಗಳಿಗೆ ಯಾವುದೇ ಸಿಟ್ಟು, ಕೋಪ ಮಾಡದೆ, ಅಸಹನೆ ತೋರದೆ ಈ ಒಂದು ಮಾತು, ಸುಮಾರು 35-40 ಜನ, ಸಂಸ್ಥೆಯ ಶಿಕ್ಷಕರುಗಳಲ್ಲಿ ಒಮ್ಮತ ಮೂಡುವಂತೆ ಮಾಡಿದ್ದು..., ಇದಲ್ಲವೇ ಸಂಸ್ಕಾರ ಕಲಿಸುವ ವಿಧಾನ. ಅಂದು ನುಡಿದಿದ್ದು ,ಇಂದಿಗೂ ಕೇಳುವಂತಾಗಿದೆ.

**ಶ್ರೀಮತಿ ವಾಗ್ದೇವಿ ಆರ್ ಅಲುಮ್ನಿ, ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ, ದಾವಣಗೆರೆ.**

# ತಾಲೂಕು ಮಟ್ಟದ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಗುರುಬಸಮ್ಮ ಆಂಗ್ಲಮಾಧ್ಯಮ ಶಾಲೆಯ ವಿದ್ಯಾರ್ಥಿ ಪ್ರಥಮ ಬಹುಮಾನ






ದಿನಾಂಕ: ೧೪/೧೧/೨೦೨೪ ರಂದು ಆರ್. ವಿ. ಜಿ. ಕೆ. ಶಾಲೆಯಲ್ಲಿ ತಾಲ್ಲೂಕು ಮಟ್ಟದ ವಿಜ್ಞಾನ ಮಟ್ಟದ ವಸ್ತು ಪ್ರದರ್ಶನದಲ್ಲಿ ವೈಯಕ್ತಿಕ ಗಣಿತ ವಿಭಾಗದಲ್ಲಿ ಉತ್ತಮ ಪ್ರದರ್ಶನ ನೀಡಿದ್ದು, ಆ ಸ್ಪರ್ಧೆಯಲ್ಲಿ ಪ್ತಥಮ ಬಹುಮಾನ ಪಡದು ಜಿಲ್ಲಾ ಮಟ್ಟದ ವಿಜ್ಞಾನ ಪ್ರದರ್ಶನಕ್ಕೆ ೯ನೇ ತರಗತಿ ಪ್ರಜ್ವಲ್ ಸಿ. ಆಯ್ಕೆಯಾಗಿರುತ್ತಾನೆ ಇವನಿಗೆ ಶ್ರೀ ದಯಾನಂದ ಗಣಿತ ಶಿಕ್ಷಕರು ಮಾರ್ಗದರ್ಶನ ನೀಡಿದ್ದರು.

# ಕ್ಲಸ್ಟರ್ ಮಟ್ದದ ಪ್ರತಿಭಾ ಕಾರಂಜಿಯಲ್ಲಿ ವಿಜೇತರಾದ ಗುರುಬಸಮ್ಮ ಆಂಗ್ಲಮಾಧ್ಯಮ ಶಾಲೆಯ ಮಕ್ಕಳು



ದಿನಾಂಕ; ೧೮/೧೧/೨೦೨೪ರಂದು ನಡೆದ ಜಿ.ಜಿ.ಎಂ.ಎಸ್. ಕ್ಲಸ್ಟರ್‌ನ ಪ್ರತಿಭಾ ಕಾರಂಜಿಯು ನರಸರಾಜ್ ಕ್ಯಾಂಪಸ್‌ನಲ್ಲೇ ನಡೆದಿದ್ದು, ಈ ಪ್ರತಿಭಾ ಕಾರಂಜಿಯಲ್ಲಿ ಪ್ರಥಮ ಬಹುಮಾನ ಒಟ್ಟು ೪, ದ್ವಿತೀಯ ಬಹುಮಾನ ೬, ತೃತೀಯ ಬಹುಮಾನ ೬, ಹೀಗೆ ೧೬ ಬಹುಮಾನಗಳನ್ನು ಪಡೆದು ಪ್ರಥಮ ಬಹುಮಾನ ಪಡೆದು ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿಗೆ ಅಯ್ಕೆಯಾಗಿದ್ದಾರೆ. ಇವರಿಗೆ ಶಾಲಾ ಮುಖ್ಯೋಪಾಧ್ಯಾಯರು, ಶಿಕ್ಷಕರು, ಆಡಳಿತ ಮಂಡಳಿಯವರು ಅಭಿನಂದನೆ ತಿಳಿಸಿದ್ದಾರೆ.

# ಪ್ರತಿಭಾಕಾರಂಜಿಯಲ್ಲಿ ಜಿಲ್ಲಾಮಟ್ಟಕ್ಕೆ ಆಯ್ಕೆಯಾದ ಗುರುಬಸಮ್ಮ ಪ್ರೌಢಶಾಲೆಯ ಮಕ್ಕಳು.









ದಿನಾಂಕ: ೦೩/೧೨/೨೦೨೫ರಂದು ನಡೆದ ತಾಲ್ಲೂಕು ಮಟ್ಟದ ಪ್ರತಿಭಾಕಾರಂಜಿಯಲ್ಲಿ ಗುರುಬಸಮ್ಮ ಪ್ರೌಢಶಾಲೆಯ ರಂಗೋಲಿಯಲ್ಲಿ ಕುಮಾರಿ ಧನುಶ್ರೀ ಪಿ.  ಮತ್ತು ಭರತನಾಟ್ಯ ಕುಮಾರಿ ಲಾವಣ್ಯ ಎಂ. ಎ. ಇವರು ಈ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಬಹುಮಾನ ಪಡೆದಿರುತ್ತಾರೆ. ಹಾಗೂ ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಇವರಿಗೆ ಶಾಲಾ ಮುಖ್ಯಸ್ಥರು, ಶಿಕ್ಷಕರು, ಶೈಕ್ಷಣಿಕ ಸಲಹೆಗಾರರು ಹಾಗೂ ಆಡಳಿತ ಮಂಡಳಿಯವರು ಈ ಮಕ್ಕಳಿಗೆ ಅಭಿನಂದನೆ ತಿಳಿಸಿದ್ದಾರೆ. ಹಾಗೂ ಮುಂದಿನ ಜಿಲ್ಲಾ ಮಟ್ಟಕ್ಕೆ ಶುಭ ಹಾರೈಸಿದ್ದಾರೆ.

# ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ 109 ನೇ ಸಂಸ್ಥಾಪಕರ ದಿನಾಚರಣೆ ಹಾಗೂ ಮಕ್ಕಳ ದಿನಾಚರಣೆ



ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯ ಆವರಣದಲ್ಲಿ ಮಕ್ಕಳ ದಿನಾಚರಣೆ ಹಾಗೂ ವಿದ್ಯಾಸಂಸ್ಥೆಯ ಸಂಸ್ಥಾಪಕರ ದಿನಾಚರಣೆ ವಿಶೇಷ ಕಾರ್ಯಕ್ರಮಗಳೊಂದಿಗೆ ಅದ್ದೂರಿಯಾಗಿ ಜರುಗಿತು. ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಸಂಸ್ಥಾಪಕರಾದ ಲಿಂ||. ಶ್ರೀ ವೀರಭದ್ರಪ್ಪ ಎಂ. ಚಿಗಟೆರಿಯವರ ೧೦೯ನೇ ಜನ್ಮದಿನೋತ್ಸವವನ್ನು ಉತ್ಸಾಹಭರಿತವಾಗಿ ಆಚರಿಸಲಾಯಿತು.ಕಾರ್ಯಕ್ರಮವನ್ನು ಪ್ರಾರ್ಥನೆಯಿಂದ ಆರಂಭಿಸಲಾಯಿತು.ಪ್ರಾಸ್ತಾವಿಕ ನುಡಿಯನ್ನು ನಮ್ಮ ವಿದ್ಯಾಸಂಸ್ಥೆಯ ಕಾರ್ಯದರ್ಶಿಯವರಾದ

ಶ್ರೀ ಮನೋಹರ್ ಎಸ್ ಚಿಗಟೇರಿ ಇವರು ಮಂಡಿಸಿದರು . ಅತಿಥಿಗಳ ಕಿರುಪರಿಚಯವನ್ನು ನಮ್ಮ ಶಾಲೆಗಳ ಶಿಕ್ಷಕರಾದ ಶ್ರೀ ಬಿ ಕೆ ಹನುಮಂತಪ್ಪ ಮತ್ತು ಶ್ರೀಮತಿ ಹೆಚ್ ಬಿ ಜ್ಯೋತಿ ಇವರು ನಡೆಸಿಕೊಟ್ಟರು. ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದವರು ಶ್ರೀ ಮುರುಗೇಂದ್ರ ವಿ ಚಿಗಟೇರಿ , ಅಧ್ಯಕ್ಷರು, ಶ್ರೀ ಜ ಜ ವಿದ್ಯಾಸಂಸ್ಥೆ (ರಿ.), ದಾವಣಗೆರೆ. ಈ ಕಾರ್ಯಕ್ರಮವನ್ನು ಉದ್ಘಾಟಿಸಿದವರು: ಪ್ರೊ|| ಮಲ್ಲಿಕಾರ್ಜುನಪ್ಪ ಜವಳಿ, ನಿವೃತ್ತ ಪ್ರಾಂಶುಪಾಲರು, ಎ. ಆರ್. ಜಿ . ಕಾಲೇಜು , ದಾವಣಗೆರೆ. ಮತ್ತು ಮುಖ್ಯ ಅತಿಥಿಗಳು ,ಡಾ|| ನೀಲಿಮಾ ಕದಂಬಿ – ವ್ಯವಸ್ಥಾಪಕ ನಿರ್ದೇಶಕರು, ಸು.ವಿ .ಧಾ., ಬೆಂಗಳೂರು . ಡಾ|| ವಿವೇಕ್ ಕಾದಂಬಿ –ಮೆಡಿಕಲ್ ಡೈರೆಕ್ಟರ್ ,ಬೆಲ್ ಸಂತೇ , ಬೆಂಗಳೂರು. ಶ್ರೀ ಬಸವರಾಜಪ್ಪ ಬೆಳಗಾವಿ , ಉಪಾಧ್ಯಕ್ಷರು, ಶ್ರೀ ಜ ಜ ವಿದ್ಯಾಸಂಸ್ಥೆ (ರಿ.), ದಾವಣಗೆರೆ ಹಾಗೂ ವಿದ್ಯಾಸಂಸ್ಥೆಯ ಸದಸ್ಯರುಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು . ನಮ್ಮ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸುರೇಶ್ ನಾಯ್ಕ್ ಜಿ ರವರು ಸ್ವಾಗತ ಕೋರಿದರು ಹಾಗೂ ವಂದನಾರ್ಪಣೆಯನ್ನು ಶ್ರೀ ನಾಗರಾಜ್ ಎಸ್ ಎನ್ ರವರು ನಡೆಸಿಕೊಟ್ಟರು . ಕಾರ್ಯಕ್ರಮದಲ್ಲಿ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ನೃತ್ಯ, ಪ್ರದರ್ಶನಗಳು ನಡೆದವು. ಮಕ್ಕಳ ಸೃಜನಶೀಲತೆ, ಪ್ರತಿಭೆ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಶಾಲೆಯು ಹಮ್ಮಿಕೊಂಡಿದ್ದ ಕಾರ್ಯಕ್ರಮಕ್ಕೆ ಶಿಕ್ಷಕರು, ಹಾಗೂ ವಿದ್ಯಾರ್ಥಿನಿಯರಿಂದ ಉತ್ತಮ ಪ್ರತಿಕ್ರಿಯೆ ಲಭಿಸಿತು.ಕಾರ್ಯಕ್ರಮದಲ್ಲಿ ಎಲ್ಲ ಅತಿಥಿಗಳು ಸಂಸ್ಥಾಪಕರ ಸೇವೆಯನ್ನು ಸ್ಮರಿಸಿ, ಅವರ ಶಿಕ್ಷಣ ಕನಸುಗಳನ್ನು ಮುಂದುವರಿಸಬೇಕೆಂಬ ಸಂಕಲ್ಪವನ್ನು ವ್ಯಕ್ತಪಡಿಸಿದರು. ಮಕ್ಕಳಿಗೆ ಪ್ರೋತ್ಸಾಹದ ಮಾತುಗಳನ್ನು ನೀಡಿ, ಅವರ ಭವಿಷ್ಯ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರವನ್ನು ಶ್ಲಾಘಿಸಿದರು.ಈ ಆಚರಣೆ ಶಾಲಾ ವಾತಾವರಣದಲ್ಲಿ ಸಂತೋಷ, ಸೃಜನಶೀಲತೆ ಮತ್ತು ಪ್ರೇರಣಾದಾಯಕ ಸನ್ನಿವೇಶವನ್ನು ಸೃಷ್ಟಿಸಿತು. **ನಮ್ಮ ಶಾಲೆ – ನಮ್ಮ ಹೆಮ್ಮೆ** ಎಂಬ ಘೋಷವಾಕ್ಯದೊಂದಿಗೆ ಕಾರ್ಯಕ್ರಮ ಯಶಸ್ವಿಯಾಗಿ ಮುಕ್ತಾಯಗೊಂಡಿತು.



# ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ – 2025-26




ದಾವಣಗೆರೆ ಉತ್ತರ ವಲಯದಲ್ಲಿ ನಡೆದ 2025-26 ನೇ ಸಾಲಿನ ಜಿ.ಜಿ.ಎಮ್.ಎಸ್ ಕ್ಲಸ್ಟರ್ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ "ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ" ದಲ್ಲಿ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ ವಿದ್ಯಾರ್ಥಿನಿಯರು ಅಪೂರ್ವ ಪ್ರತಿಭೆಯನ್ನು ಪ್ರದರ್ಶಿಸಿ ಹಲವಾರು ಸ್ಪರ್ಧೆಗಳಲ್ಲಿ ಉತ್ತಮ ಸ್ಥಾನಗಳನ್ನು ಪಡೆದುಕೊಂಡಿದ್ದಾರೆ.ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿನಿಯರು ಒಟ್ಟು 16 ಬಹುಮಾನಗಳನ್ನು ಗಳಿಸಿದ್ದು, ಅದರಲ್ಲಿ 5 ಪ್ರಥಮ ಸ್ಥಾನ, 9 ದ್ವಿತೀಯ ಸ್ಥಾನ ಮತ್ತು 2 ತೃತೀಯ ಸ್ಥಾನಗಳು ಸೇರಿವೆ. ನಮ್ಮ ಶಾಲೆಯ ಸಾಧನೆ ಕ್ಲಸ್ಟರ್ ಮಟ್ಟದಲ್ಲಿ ವಿಶೇಷ ಪ್ರಶಂಸೆಗೆ ಪಾತ್ರವಾಗಿದೆ

**ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿಯರು**

ಪ್ರಿಯಾಂಕ P (10th) – ಕನ್ನಡ ಭಾಷಣ ಸ್ಪರ್ಧೆ(ವಿಷಯ: "ಪ್ರಕೃತಿಯೊಂದಿಗೆ ಮಾನವನ ಸಂಘರ್ಷ") ಅಕ್ಷತಾ B (10th) – ಭಾವಗೀತೆ ಚಾಂದಿನಿ ಖಾನಂ (8th) – ಮಿಮಿಕ್ರಿ ಸಂಪೂರ್ಣ & ಸಂಗಡಿಗರು (10th) – ಜಾನಪದ ನೃತ್ಯ ಕಲ್ಪನಾ G M & ಸುಶೀಲ (10th) – ಕ್ವಿಜ್

## ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ – ಭಾರತ ಸಂವಿಧಾನ ದಿನ ಆಚರಣೆ

ಭಾರತ ಸಂವಿಧಾನ ದಿನ-ನವೆಂಬರ್ 26ರಂದು ನಮ್ಮ ಶಾಲೆಯಲ್ಲಿ ಭಾರತ ಸಂವಿಧಾನ ದಿನವನ್ನು ಘನತೆಯಿಂದ ಅರ್ಥಪೂರ್ಣವಾಗಿ ಆಚರಿಸಲಾಯಿತು.1949ರಲ್ಲಿ ಇದೇ ದಿನ ಭಾರತವು ತನ್ನ ಸಂವಿಧಾನವನ್ನು ಅಧಿಕೃತವಾಗಿ ಸ್ವೀಕರಿಸಿತು. ಈ ಮಹತ್ವದ ದಿನವನ್ನು ಸ್ಮರಿಸುವ ಮೂಲಕ ವಿದ್ಯಾರ್ಥಿನಿಯರಿಗೆ ಸಂವಿಧಾನದಲ್ಲಿ ಅಡಕವಾಗಿರುವ ಮೌಲ್ಯಗಳು, ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕರು ಸಂವಿಧಾನದ ಮಹತ್ವ, ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಕೊಡುಗೆ ಹಾಗೂ ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ಬಗ್ಗೆ ತಿಳಿಸಿದರು. ವಿದ್ಯಾರ್ಥಿನಿಯರು ಸಂವಿಧಾನದ ಪ್ರಾಸ್ತಾವಿಕೆಯನ್ನು ವಾಚಿಸಿ, ಸಂವಿಧಾನದ ಮೌಲ್ಯಗಳನ್ನು ಜೀವನದಲ್ಲಿ ಪಾಲಿಸುವ ಪ್ರತಿಜ್ಞೆಯನ್ನು ತೆಗೆದುಕೊಂಡರು.ಈ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿನಿಯರಲ್ಲಿ ಸಮಾನತೆ, ಸ್ವಾತಂತ್ರ್ಯ, ಬಾಂಧವ್ಯ ಮತ್ತು ನ್ಯಾಯ ಎಂಬ ಮೂಲ್ಯಗಳನ್ನು ಬಲಪಡಿಸುವ ಉದ್ದೇಶ ಯಶಸ್ವಿಯಾಯಿತು.








## ಕಲಾಶ್ರೀ ಪ್ರಶಸ್ತಿ ಆಯ್ಕೆ ಶಿಬಿರದಲ್ಲಿ ಭಾಗವಹಿಸುವಿಕೆ

ದಿನಾಂಕ 17.11.2025 ರಿಂದ 19.11.2025 ರ ವರೆಗೆ ನಡೆದ ರಾಜ್ಯ ಬಾಲಭವನ ಸೊಸೈಟಿ ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ದಾವಣಗೆರೆ ಜಿಲ್ಲಾ ಬಾಲಭವನ ಸಮಿತಿ (ರಿ) ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ದಾವಣಗೆರೆ ಇವರುಗಳ ಸಹಭಾಗಿತ್ವದಲ್ಲಿ ಏರ್ಪಡಿಸಿದ ಜಿಲ್ಲಾಮಟ್ಟದ ಮಕ್ಕಳ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ನಮ್ಮ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಪ್ರೀತಮ್ ಪಿ ಭಾಗವಹಿಸಿದ್ದು ಚಿತ್ರಕಲಾ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನವನ್ನು ಪಡೆದುಕೊಂಡು, ಬೆಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾನೆ. ಈ ವಿದ್ಯಾರ್ಥಿಗೆ ಪ್ರಶಸ್ತಿ ಪ್ರಮಾಣ ಪತ್ರ ಮತ್ತು ಪಾರಿತೋಷಕವನ್ನು ನೀಡಿ ಗೌರವಿಸಿರುತ್ತಾರೆ.

## ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ



ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 50 ವರ್ಷಗಳ ಸುವರ್ಣ ಮಹೋತ್ಸವ ಸಮಾರಂಭದ ಅಂಗವಾಗಿ 2025ರ ಅಕ್ಟೋಬರ್ 10ರಂದು ಪ್ರೌಢಶಾಲಾ ವಿಭಾಗದಲ್ಲಿ ನಡೆದ ಚಿತ್ರಕಲಾ ಸ್ಪರ್ಧೆಯಲ್ಲಿ ನಮ್ಮ ಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ಮಧು ಎಸ್ ಮಡಿವಾಳರ್ ಪ್ರಥಮ ಸ್ಥಾನವನ್ನು ಪಡೆದುಕೊಂಡಿರುತ್ತಾಳೆ. ಇವಳಿಗೆ 2,000 ನಗದು ಮತ್ತು ಪ್ರಶಂಸನಾ ಪತ್ರ ಹಾಗೂ ಪಾರಿತೋಷಕವನ್ನು ನೀಡಿ ಪ್ರೋತ್ಸಾಹಿಸುತ್ತಾರೆ. ಅದೇ ರೀತಿಯಾಗಿ ಅಂಕಿತ ಎನ್ ಹುಗ್ಗಿ ಎಂಬ ವಿದ್ಯಾರ್ಥಿನಿಯು ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಿ ತೃತೀಯ ಸ್ಥಾನವನ್ನು ಪಡೆದುಕೊಂಡಿರುತ್ತಾಳೆ. ಇವರಿಗೆ ನಮ್ಮ ಶಾಲೆಯ ಪರವಾಗಿ ಮತ್ತು ಸಂಸ್ಥೆಯ ಪರವಾಗಿ ಅಭಿನಂದನೆಗಳು.



ಜಿಲ್ಲಾಡಳಿತ, ಜಿಲ್ಲಾ ಪಂಚಯತ್ & ಸಮಾಜ ಕಲ್ಯಾಣ ಇಲಾಖೆ ವತಿಯಿಂದ, ಮತದಾರ ದಿನದಂದು, ಮತದಾನದ ಕುರಿತು ಚಿತ್ರಕಲಾ ಸ್ಪರ್ಧೆಯಲ್ಲಿ ಶ್ರೀ ಜ ಜ ಮು ಪ್ರೌಢಶಾಲೆಯ  10ನೇ ತರಗತಿಯ ವಿದ್ಯಾರ್ಥಿ ಯಶೋಧರ ತಾಲ್ಲೂಕು ಮಟ್ಟದಲ್ಲಿ ಪ್ರಥಮಸ್ಥಾನ ಪಡೆದು , ಜಿಲ್ಲಾಮಟ್ಟದಲ್ಲಿ ದ್ವಿತಿಯಸ್ಥಾನವನ್ನು ಪಡೆದು ಮಾನ್ಯ ಸಂಸದರಾದ ಶ್ರೀಮತಿ ಪ್ರಭಾಮಲ್ಲಿಕಾರ್ಜುನ ಅವರಿಂದ ಪ್ರಶಸ್ತಿಪತ್ರ ಮತ್ತುಫಲಕದೊಂದಿಗೆ ರೂ.15000/– ನಗದು ಬಹುಮಾನ ಪಡೆದು ನಮ್ಮ ಶಾಲೆಗೆ ಕೀರ್ತಿ ತಂದಿದ್ದಾನೆ.

# ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ


ದಿನಾಂಕ 19–11.2025ರಂದು ನಡೆದ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಶ್ರೀ ಜ ಜ ಮು ಪ್ರೌಢಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದು ಮಕ್ಕಳು ಕೆಲವೊಂದು ಸ್ಪರ್ಧೆಗಳಲ್ಲಿ ಉತ್ತಮವಾದ ರೀತಿಯಲ್ಲಿ ಭಾಗವಹಿಸಿ ಪ್ರಶಸ್ತಿ ಪತ್ರವನ್ನು ಪಡೆದಿರುತ್ತಾರೆ . ಪದ್ಯ ವಾಚನ ಸ್ಪರ್ಧೆಯಲ್ಲಿ ಅಂಕಿತ ಎನ್ ಹುಗ್ಗಿ ಪ್ರಥಮ ಸ್ಥಾನವನ್ನು ಪಡೆದಿರುತ್ತಾಳೆ. ಜನಪದ ಗೀತೆ ಸ್ಪರ್ಧೆಯಲ್ಲಿ ತನುಜ ಎಂ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾಳೆ. ಭಾವಗೀತೆ ಸ್ಪರ್ಧೆಯಲ್ಲಿ ರೀತು ಎಸ್ ಬಿ ತೃತೀಯ ಸ್ಥಾನವನ್ನು ಪಡೆದಿರುತ್ತಾಳೆ. ಚರ್ಚಾ ಸ್ಪರ್ಧೆಯಲ್ಲಿ ಅಪೇಕ್ಷಾ ಎಂ ಶೇಟ್ ತೃತೀಯ ಸ್ಥಾನವನ್ನು ಪಡೆದಿರುತ್ತಾಳೆ. ಆಶುಭಾಷಣ ಸ್ಪರ್ಧೆಯಲ್ಲಿ ಯೋಗೀಶ್ ಜಿ ಹೆಚ್ ತೃತೀಯ ಸ್ಥಾನವನ್ನು ಪಡೆದುಕೊಂಡಿರುತ್ತಾನೆ . ಈ ಎಲ್ಲ ಮಕ್ಕಳಿಗೂ ಶಾಲೆ & ಸಂಸ್ಥೆ ಪರವಾಗಿ ಅಭಿನಂದನೆಗಳು.

# ವಿಜ್ಞಾನ ವಸ್ತು ಪ್ರದರ್ಶನ




ದಿನಾಂಕ:26.11.2025 ರಂದು ತಾಲೂಕು ಮಟ್ಟದ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ನಮ್ಮ ಶಾಲೆಯ ಮಕ್ಕಳು ಭಾಗವಹಿಸಿದ್ದು, ಆ ಒಂದು ವಿಜ್ಞಾನ ವಸ್ತು ಪ್ರದರ್ಶನದಲ್ಲಿ 9ನೇ ತರಗತಿ ವಿದ್ಯಾರ್ಥಿ ಹರ್ಷಿತ್ ಜಿ ಎಸ್ ಸೋಲಾರ್ ಮಾದರಿಯಲ್ಲಿ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿರುತ್ತಾರೆ . ಜೊತೆಗೆ ಜಿಲ್ಲಾ ಮಟ್ಟಕ್ಕೆ ಆಯ್ಕೆ ಆಗಿರುತ್ತಾನೆ. ವೇದ ಜಿ ಪಿ 9ನೇ ತರಗತಿ ವಿದ್ಯಾರ್ಥಿನಿ ರುದರ್ ಫೋರ್ಟ್ ರವರ ಪರಮಾಣು ಮಾದರಿಯಲ್ಲಿ ತೃತೀಯ ಸ್ಥಾನವನ್ನು ಪಡೆದುಕೊಂಡಿರುತ್ತಾಳೆ. ಮತ್ತು ಎಂಟನೇ ತರಗತಿ ವಿದ್ಯಾರ್ಥಿನಿ ನಿಕಿತಾ ಕೆ ಎಂ ಹಲ್ಲಿನ ಮಾದರಿಯಲ್ಲಿ ಸಮಾಧಾನಕರ ಬಹುಮಾನವನ್ನು ಪಡೆದುಕೊಂಡಿರುತ್ತಾಳೆ. ಈ ಒಂದು ವಸ್ತು ಪ್ರದರ್ಶನದಲ್ಲಿ ಸಮಾರು 11 ಮಾದರಿಗಳನ್ನು ನಮ್ಮ ಶಾಲೆಯ ವಿದ್ಯಾರ್ಥಿಗಳು ಪ್ರಸ್ತುತ ಪಡಿಸಿದ್ದರು. ಎಲ್ಲಾ ಮಕ್ಕಳಿಗೂ ಪ್ರಶಸ್ತಿ ಪ್ರಮಾಣ ಪತ್ರವನ್ನು ನೀಡಿ ಅಭಿನಂದಿಸಿರುತ್ತಾರೆ.

# ಹಣತೆಯ ತೈಲವಾದ ಶ್ರೀ ವೀರಭದ್ರಪ್ಪ ಎಂ ಚಿಗಟೇರಿ



ಶ್ರೀ ಜಗದ್ಗುರು ಜಯವಿಭವ ವಿದ್ಯಾ ಸಂಸ್ಥೆ (ರಿ) ದಾವಣಗೆರೆಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀಯುತ ವೀರಭದ್ರಪ್ಪ ಎಂ ಚಿಗಟೇರಿ ಇವರ 109ನೇ ಜನ್ಮ ದಿನೋತ್ಸವ ಮತ್ತು ಮಕ್ಕಳ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀ ಪ್ರೊ॥ ಮಲ್ಲಿಕಾರ್ಜುನಪ್ಪ ಜವಳಿ ನಿವೃತ್ತ ಪ್ರಾಂಶುಪಾಲರು ಎ ಆರ್ ಜಿ ಕಾಲೇಜ್ ದಾವಣಗೆರೆ ಇವರು ಒಬ್ಬ ವ್ಯಕ್ತಿಯ ವ್ಯಕ್ತಿತ್ವ ರೂಪಗೊಳ್ಳಲು ಶ್ರೀ ವೀರಭದ್ರಪ್ಪನವರು ನಡೆದುಕೊಂಡು ಬಂದಂತಹ ದಾರಿ ಮಾದರಿಯಾಗಿದೆ. ಓದು, ಒಕ್ಕಾಲು ಬುದ್ದಿ ಮುಕ್ಕಾಲು ಎನ್ನುವ ನಾನ್ನುಡಿಯತೆ , ನಮ್ಮ ಓದು ಮತ್ತು ಬುದ್ಧಿ ಸಾಮಾಜಿಕವಾಗಿರಬೇಕು. ವೀರಭದ್ರಪ್ಪನವರು ಸಮಾಜಕ್ಕೆ ನೀಡಿದ ಕೊಡುಗೆ ಅನನ್ಯವಾದದ್ದು , ಸಾಮಾಜಿಕವಾಗಿ ಆರ್ಥಿಕವಾಗಿ ಶೈಕ್ಷಣಿಕವಾಗಿ ಸಮಾಜಕ್ಕೆ ಅವರ ಕೊಡುಗೆ ಅಪಾರ. ಹಣತೆ ಪ್ರಜ್ವಲಿಸಬೇಕಾದರೆ ಅದಕ್ಕೆ ಹಣತೆ, ಬತ್ತಿ ಹೇಗೆ ಮುಖ್ಯವೋ, ಎಣ್ಣೆಯೂ ಅಷ್ಟೇ ಮುಖ್ಯವಾಗುತ್ತದೆ . ಹಾಗೆಯೇ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ವೀರಭದ್ರಪ್ಪನವರು ಹಣತೆಗೆ ಎಣ್ಣೆಯಾಗಿ ಇಡೀ ಸಮಾಜಕ್ಕೆ ಬೆಳಕಾಗಿದ್ದಾರೆ. ಪ್ರಸಿದ್ಧ ಉದ್ಯಮಿದಾರರಾಗಿ ಸಮಾಜಮುಖಿ ಕೆಲಸಗಳನ್ನು ಮಾಡಿದ್ದಾರೆ. ನೀರಿನಲ್ಲಿ ಹುಟ್ಟಿದ ಉಪ್ಪು, ನೀರಿನಿಂದಲೇ ತಯಾರಾದ ಮಂಜುಗಡ್ಡೆ ನೀರಿನಲ್ಲಿಯೇ ಕರಗುತ್ತವೆ ಆದರೆ ನೀರಿನಲ್ಲಿ ಹುಟ್ಟಿದ ಮುತ್ತು ಕಿರೀಟದಲ್ಲಿ ಪ್ರಜ್ವಲಿಸುತ್ತದೆ. ಅದರಂತೆ ವೀರಭದ್ರಪ್ಪನವರು ಸಮಾಜದಲ್ಲಿ ಒಂದು ಮುತ್ತಿನಂತೆ ಪ್ರಜ್ವಲಿಸುತ್ತಿದ್ದಾರೆ ಎಂದು ಅವರನ್ನು ಸ್ಮರಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾ॥ ನೀಲಿಮಾ ಕದಂಬಿ ವ್ಯವಸ್ಥಾಪಕ ನಿರ್ದೇಶಕರು ಸುವಿಧಾ ಬೆಂಗಳೂರು ಹಾಗೂ ಡಾ॥ವಿವೇಕ್ ಕದಂಬಿ ಮೆಡಿಕಲ್ ಡೈರೆಕ್ಟರ್ ಬೇಲ್ ಸಂತೆ ಇನ್ಸಿಟ್ಯೂಟ್ ಬೆಂಗಳೂರು ದಂಪತಿಗಳು ವಿದ್ಯಾರ್ಥಿಗಳೊಡನೆ ಸಂವಾದ ನಡೆಸಿ ವಿದ್ಯಾರ್ಥಿಗಳಿಗೆ ನಗುವಿನ ಮಹತ್ವವನ್ನು ಮತ್ತು ಮಕ್ಕಳನ್ನು ನಗಿಸುವುದರ ಮುಖಾಂತರ ಅವರಿಗೆ ಆರೋಗ್ಯದ ಮಹತ್ವವನ್ನು ತಿಳಿಸಿದರು. ನೀಲಿಮಾ ಕದಂಬಿ ಅವರು ತಮ್ಮ ಅಜ್ಜಿಯವರಿಂದ ಕಲಿತ ಸಂಸ್ಕಾರಗಳನ್ನ ಹಾಗೂ ನೆನಪುಗಳನ್ನು ವೇದಿಕೆ ಮುಖಾಂತರ ಸ್ಮರಿಸಿಕೊಂಡರು. ಜೀವನದಲ್ಲಿ ಉತ್ತಮ ಮೌಲ್ಯಗಳನ್ನು ಅಳವಡಿಸಿ

ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾ॥ ನೀಲಿಮಾ ಕದಂಬಿ ವ್ಯವಸ್ಥಾಪಕ ನಿರ್ದೇಶಕರು ಸುವಿಧಾ ಬೆಂಗಳೂರು ಹಾಗೂ ಡಾ॥ ವಿವೇಕ್ ಕದಂಬಿ ಮೆಡಿಕಲ್ ಡೈರೆಕ್ಟರ್ ಬೇಲ್ ಸಂತೆ ಇನ್ಸಿಟ್ಯೂಟ್ ಬೆಂಗಳೂರು ದಂಪತಿಗಳು ವಿದ್ಯಾರ್ಥಿಗಳೊಡನೆ ಸಂವಾದ ನಡೆಸಿ ವಿದ್ಯಾರ್ಥಿಗಳಿಗೆ ನಗುವಿನ ಮಹತ್ವವನ್ನು ಮತ್ತು ಮಕ್ಕಳನ್ನು ನಗಿಸುವುದರ ಮುಖಾಂತರ ಅವರಿಗೆ ಆರೋಗ್ಯದ ಮಹತ್ವವನ್ನು ತಿಳಿಸಿದರು. ನೀಲಿಮಾ ಕದಂಬಿ ಅವರು ತಮ್ಮ ಅಜ್ಜಿಯವರಿಂದ ಕಲಿತ ಸಂಸ್ಕಾರಗಳನ್ನ ಹಾಗೂ ನೆನಪುಗಳನ್ನು ವೇದಿಕೆ ಮುಖಾಂತರ ಸ್ಮರಿಸಿಕೊಂಡರು. ಜೀವನದಲ್ಲಿ ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ದೇವರು ಒಬ್ಬನೇ ನಾಮ ಹಲವು. ಹಾಗಾಗಿ ಆ ದೇವರಲ್ಲಿ ನಾವು ಭಕ್ತಿ ಮತ್ತು ಶ್ರದ್ಧೆಯನ್ನು ಬೆಳೆಸಿಕೊಳ್ಳಬೇಕು. ಒಳ್ಳೆಯ ಆಹಾರ ಪದ್ಧತಿಯನ್ನು ವಿದ್ಯಾರ್ಥಿಗಳು ರೂಡಿಸಿಕೊಳ್ಳಬೇಕು ಎಂದು ತಿಳಿಸಿದರು.ವಿದ್ಯಾಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀ ಮನೋಹರ್ ಎಸ್ ಚಿಗಟೇರಿ ಅವರು ಪ್ರಾಸ್ತಾವಿಕ ನುಡಿಗಳನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ವಿದ್ಯಾ ಸಂಸ್ಥೆಯಿಂದ ಬಿಡುಗಡೆಯಾಗುವ ವಿದ್ಯಾವರಣ ಮಾಸಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು. ವಿದ್ಯಾವರಣ ಪತ್ರಿಕೆಯ ಸಂಪಾದಕರಾದ ಶ್ರೀ ನಿಂಗಪ್ಪ ಎಚ್ ಮುಖ್ಯೋಪಾಧ್ಯಾಯರು ಸಂಪಾದಕರ ನುಡಿಗಳನ್ನು ತಿಳಿಸಿದರು. ಸಂಸ್ಥಾಪಕರ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ್ದ ಭಾಷಣ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.ಕುಮಾರಿ ಜುನ್ನೈರ ಎಂ ವಿದ್ಯಾರ್ಥಿನಿ ಮಕ್ಕಳ ದಿನಾಚರಣೆ ಕುರಿತು ಭಾಷಣ ಮಾಡಿ ಎಲ್ಲರ ಮೆಚ್ಚುಗೆ ಪಡೆದಳು. ಕುಮಾರಿ ಅಂಕಿತ ಎನ್ ಸಂಸ್ಥಾಪಕರ ಕುರಿತು ಭಾಷಣ ಮಾಡಿದಳು.ಅಧ್ಯಕ್ಷತೆಯನ್ನ ವಹಿಸಿದಂತ ಶ್ರೀ ಮುರಗೇಂದ್ರ ವಿ ಚಿಗಟೇರಿಯವರು ಮಕ್ಕಳಿಗೆ ಮಕ್ಕಳ ದಿನಾಚರಣೆಯ ಶುಭಾಶಯಗಳನ್ನು ತಿಳಿಸಿದರು.
ಕಾರ್ಯಕ್ರಮದಲ್ಲಿ ಬಸವರಾಜಪ್ಪ ಬೆಳಗಾವಿ ಉಪಾಧ್ಯಕ್ಷರು ಶ್ರೀ ಜ ಜ ವಿದ್ಯಾಸಂಸ್ಥೆ ದಾವಣಗೆರೆ, ಮನೋಹರ ಎಸ್ ಚಿಗಟೇರಿ ಕಾರ್ಯದರ್ಶಿಯವರು, ಶ್ರೀಮತಿ ಸೌಮ್ಯ ಎಸ್ ಬಸವರಾಜ್ ಸಹಕಾರ್ಯದರ್ಶಿಗಳು, ಆಡಳಿತ ಮಂಡಳಿಯ ಇತರ ಸದಸ್ಯರು, ಶ್ರೀಮತಿ ಆರ್ ವಾಗ್ದೇವಿ ಶೈಕ್ಷಣಿಕ ಸಲಹೆಗಾರರು, ಶ್ರೀ ಎಂ ಟಿ ಮಳಗಿ ಶೈಕ್ಷಣಿಕ ಸಲಹೆಗಾರರು ಉಪಸ್ಥಿತರಿದ್ದರು.

ಶ್ರೀ ಜಿ ಎಸ್ ಸುರೇಶ್ ನಾಯಕ್ ಮುಖ್ಯೋಪಾಧ್ಯಾಯರು AGHS ಎಲ್ಲ ಅತಿಥಿ ಗಣ್ಯರನ್ನು ಸ್ವಾಗತಿಸಿದರು. ಶ್ರೀ ಬಿಕೆ ಹನುಮಂತಪ್ಪ ಸಹ ಶಿಕ್ಷಕರು AGHS , ಶ್ರೀಮತಿ ಎಚ್ ಬಿ ಜ್ಯೋತಿ ಸಹ ಶಿಕ್ಷಕಿ SJJMHS ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಪ್ರಾರ್ಥನೆಯನ್ನು ಮುರುಘರಾಜೇಂದ್ರ ಪ್ರೌಢಶಾಲೆ ವಿದ್ಯಾರ್ಥಿಗಳು ಮಾಡಿದರು. ಶ್ರೀ ಎಸ್ ನಾಗರಾಜ್ ಮುಖ್ಯೋಪಾಧ್ಯಾಯರು SJJMHS ವಂದನಾರ್ಪಣೆ ಮಾಡಿದರು. ಶ್ರೀ ಬಸವರಾಜ್ ಸಹ ಶಿಕ್ಷಕರು GVCHS ನಿರೂಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆಯ ಅಡಿಯಲ್ಲಿ ನಡೆಯುವ ಎಲ್ಲ ಶಾಲೆಗಳ ಮುಖ್ಯೋಪಾಧ್ಯಾಯರು ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳು, ಪೋಷಕರು ಭಾಗವಹಿಸಿದ್ದರು.

## ವಚನ ಗಾಯನ ಮತ್ತು ಉಪನ್ಯಾಸ ಕಾರ್ಯಕ್ರಮ



ನಿಮ್ಮ ಗುರಿ ಸ್ಪಷ್ಟವಾಗಿರಲಿ. ನಿಮ್ಮ ಪರಿಶ್ರಮ ದೊಡ್ಡದಾಗಿರಲಿ. ನಿಮ್ಮ ನಿರ್ಧಾರ ದೃಢವಾಗಿರಲಿ.ಹೀಗೆ ನಡೆದು ನೋಡಿರಿ — ಯಶಸ್ಸು ನಿಮಗೇ ಬಂದು ತಟ್ಟುತ್ತದೆ. ವಿದ್ಯಾರ್ಥಿ ಜೀವನದಲ್ಲಿ ಗುರಿ ತಲುಪಲು ಮೂರು ಮುಖ್ಯವಾದ ಅಂಶಗಳು 1.ದಾರಿ,2.ಜವಾಬ್ದಾರಿ.3. ತಯಾರಿ
ಸರಿಯಾದ ದಾರಿಯನ್ನು ಆಯ್ಕೆ ಮಾಡಿದಾಗ ನಿಮ್ಮ ಪ್ರಯಾಣಕ್ಕೆ ದಿಕ್ಕು ಸಿಗುತ್ತದೆ. ಪ್ರತಿದಿನದ ತಯಾರಿ ನಿಮ್ಮನ್ನು ಗುರಿಯತ್ತ ಹತ್ತಿರಕ್ಕೆ ಕೊಂಡೊಯ್ಯುತ್ತದೆ. ಸ್ವಂತ ಜವಾಬ್ದಾರಿ ನಿಮ್ಮ ಕೆಲಸಕ್ಕೆ ಶಿಸ್ತು, ಸಮಯ ನಿರ್ವಹಣೆ ಮತ್ತು ಬದ್ಧತೆಯನ್ನು ಕೊಡುತ್ತದೆ. ಆದರೆ ಈ ಎಲ್ಲವನ್ನು ಸೇರಿಸುವ ಶಕ್ತಿ ಒಂದೇ — ಅದು ಏಕಾಗ್ರತೆ.

*ಏಕಾಗ್ರತೆ ಇದ್ದರೆ: *ಆಯ್ದ ದಾರಿ ತಪ್ಪುವುದಿಲ್ಲ, * ಮಾಡಿದ ತಯಾರಿ ವ್ಯರ್ಥವಾಗುವುದಿಲ್ಲ, ಜವಾಬ್ದಾರಿ ಎಂದೂ ಕಡಿಮೆಯಾಗುವುದಿಲ್ಲ,ಗುರಿ ತಲುಪುವುದು ಖಚಿತವಾಗುತ್ತದೆ.

ಆದ್ದರಿಂದ ಜೀವನದಲ್ಲಿ ಯಶಸ್ಸು ಬೇಕೆಂದರೆ: **"ಗುರಿಗೆ YES — ಉಳಿದ ವ್ಯತ್ಯಯಗಳಿಗೆ NO"** 'IF YOU SAY TO YES FOR 1 THING, AND SAY TO NO FOR 99 THINGS' ಎಂದು ಹೇಳುವ ಏಕಾಗ್ರತೆಯ ಜೀವನಶೈಲಿ ಬೆಳೆಸಿಕೊಳ್ಳಬೇಕು. ಭಗವದ್ಗಿತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ 'ಸಮಯ ಮತ್ತು ವೈರಾಗ್ಯ' ಪಾಲಿಸಿದಾಗ ಮಾತ್ರ ಏಕಾಗ್ರತೆಯ ಹೆಚ್ಚಿಸಿಕೊಳ್ಳಲು ಸಾಧ್ಯ ಎಂದು ಹೇಳಿದ್ದಾರೆ. ನೀರಡಿಕೆಯಾದ ಇಪ್ಪತ್ತು ಕುದುರೆಗಳಿಗೆ ಒಬ್ಬ ವ್ಯಕ್ತಿ ನೀರನ್ನು ಕುಡಿಸಬಲ್ಲ, ಆದರೆ ನೀರಡಿಕೆಯಾಗದ ಒಂದು ಕುದುರೆಗೆ ಇಪ್ಪತ್ತು ಜನರಿಂದಲೂ ನೀರು ಕುಡಿಸಲೂ ಸಾಧ್ಯವಾಗದು. ಹಾಗಾಗಿ ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಆಸಕ್ತಿ ಇದ್ದಾಗ ಮಾತ್ರ ಕಲಿಸಲು ಸಾಧ್ಯ ಎಂದೂ ಶಿಕ್ಷಣ ಸಲಹೆಗಾರರಾದ ಶ್ರೀಯುತ ಜಗನ್ನಾಥ ನಾಡಿಗೇರ್ ಅವರು ಅಭಿಪ್ರಾಯ ತಿಳಿಸಿದರು. **ಡಾಕ್ಟರ್ ಪಂಡಿತ್ ಪುಟ್ಟರಾಜ ಸೇವಾ ಸಮಿತಿಯ ಜಿಲ್ಲಾ ಮಹಿಳಾ ಘಟಕ ಇವರ ಆಶ್ರಯದಲ್ಲಿ ಸ್ಥಳೀಯ ವಿನೋಬನಗರದ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ಮಂಗಳವಾರ ಆಯೋಜಿಸಿದ್ದ ಮಕ್ಕಳ ದಿನಾಚರಣೆ ಹಾಗೂ ವಚನ ಶಿಬಿರದಲ್ಲಿ** ಭಾಗವಹಿಸಿ ಅವರು **'ಮಕ್ಕಳಿಗೆ ಪರೀಕ್ಷಾ ಸಮಯದಲ್ಲಿ ಏಕಾಗ್ರತೆ'** ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.ಮುಖ್ಯೋಪಾಧ್ಯಾಯರದ ಎಸ್ ನಾಗರಾಜ್ ಮತ್ತು ಪಂಡಿತ್ ಪುಟ್ಟರಾಜ ಜಿಲ್ಲಾ ಘಟಕದ ಅಧ್ಯಕ್ಷ ಪಿ ಬಿ ವಿನಾಯಕ್ ಮತ್ತು ಸೇವಾ ಸಮಿತಿ ಅಧ್ಯಕ್ಷರಾದ ಸೌಮ್ಯ ಸತೀಶ್, ಶೈಕ್ಷಣಿಕ ಸಲಹೆಗಾರರಾದ ಶ್ರೀಮತಿ ವಾಗ್ದೇವಿ ಆರ್ & ಶ್ರೀ ಎಂ ಟಿ ಮಳಗಿ,ಮುಖ್ಯೋಪಾಧ್ಯಾನಿ ಶ್ರೀಮತಿ ಶೈಲಜಾ ಎಸ್ ಎಂ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ವೇಷ ಭೂಷಣ ಸ್ಪರ್ಧೆ













ನಮ್ಮ ವಿದ್ಯಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ವೀರಭದ್ರಪ್ಪ ಎಂ ಚಿಗಟೇರಿ ಯವರ ಜನ್ಮದಿನಾಚರಣೆ ಹಾಗೂ ಮಕ್ಕಳ ದಿನಾಚರಣೆಯ ಸವಿ ನೆನಪಿಗಾಗಿ ದಿನಾಂಕ 12.11.2025 ರಂದು ಶ್ರೀ ವೀರಭದ್ರಪ್ಪ ಎಂ ಚಿಗಟೇರಿ ನರ್ಸರಿ ಹಾಗೂ ಹಿರಿಯ ಪ್ರಾಥಮಿಕ ಶಾಲೆ ಕನ್ನಡ ಮತ್ತು ಆಂಗ್ಲ ಮಾಧ್ಯಮ ವಿದ್ಯಾರ್ಥಿಗಳಿಗೆ ವಿವಿಧ ವೇಷ ಭೂಷಣ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು ತೀರ್ಪುಗಾರರಾಗಿ ಶ್ರೀಮತಿ ರೂಪ ಮೇಡಂ SCS ಹಾಗೂ ಶ್ರೀಮತಿ ಶ್ವೇತ ಮೇಡಂ SJJMHS ಇವರು ನಡೆಸಿಕೊಟ್ಟರು . 75 ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು . ವಿದ್ಯಾಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀ ಮನೋಹರ್ ಎಸ್ ಚಿಗಟೇರಿಯವರು ಹಾಗೂ ಶೈಕ್ಷಣಿಕ ಸಲಹೆಗಾರರಾದ ಶ್ರೀಮತಿ ವಾಗ್ದೇವಿ ಮೇಡಂ ರವರು ಮತ್ತು ಶಾಲಾ ಮುಖ್ಯೋಪಾಧ್ಯಾಯರು ಶಿಕ್ಷಕ ವೃಂದದವರು ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

# ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ






ಶ್ರೀ ವೀರಭದ್ರಪ್ಪ ಎಂ ಚಿಗಟೇರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ದಿನಾಂಕ 19 11 2025 ರಂದು ನಡೆದ ವಿನೋಬನಗರ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದಿದ್ದಾರೆ

1 ಆರಾಧ್ಯ ಜಿ ಪಿ- ಪ್ರಬಂಧ ಸ್ಪರ್ಧೆ ಪ್ರಥಮ

2. ಸಾನ್ವಿ ಎಸ್ ಎಸ್ ಮಠ-ಆಶುಭಾಷಣ ಪ್ರಥಮ

3 ಸಾಕ್ಷಿ ಎಸ್- ದೇಶಭಕ್ತಿ ಗೀತೆ ಪ್ರಥಮ

4 ಸಾನ್ವಿ ಎಸ್ ಎಸ್ ಮಠ- ಕಥೆ ಹೇಳುವುದು - ದ್ವಿತೀಯ

5 ವಿಕಾಸ್ ಎನ್ ಹುಗ್ಗಿ - ಪದ್ಯ ವಾಚನ ದ್ವಿತೀಯ

6 ಖುಷಿಕುಮಾರಿ ಇಂಗ್ಲಿಷ್ ಕಂಠಪಾಠ -ತೃತೀಯ

7 ಶರತ್ ಎನ್ ಕ್ಲೇ ಮಾಡೆಲ್ ತೃತೀಯ

ಪ್ರಥಮ ಬಹುಮಾನ ಪಡೆದ ವಿದ್ಯಾರ್ಥಿಗಳು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ ಹಾಗೂ ಬಹುಮಾನ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೂ ಆಡಳಿತ ಮಂಡಳಿಯ ಪರವಾಗಿ ಹಾಗೂ ಶಾಲೆಯ ಪರವಾಗಿ ಅಭಿನಂದನೆಗಳು.

ಶ್ರೀ ವೀರಭದ್ರಪ್ಪ ಎಂ ಚಿಗಟೇರಿ ಹಿರಿಯ ಪ್ರಾಥಮಿಕ ಶಾಲೆ ಯ ವಿದ್ಯಾರ್ಥಿ ಕುಮಾರಿ ಆರಾಧ್ಯ ಜಿ ಪಿ 7ನೇತರಗತಿ ಕನ್ನಡ ಮಾಧ್ಯಮ ಇವಳು ಕ್ಷೇತ್ರ ಸಮೂಹ ಸಂಪನ್ಮೂಲ ಕೇಂದ್ರ ದಾವಣಗೆರೆ ದಕ್ಷಿಣ ವಲಯ ಇಲ್ಲಿ ನಡೆದ ಪ್ರಬಂಧ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದಿದ್ದಾಳೆ. ಪ್ರಬಂಧದ ವಿಷಯ-ಪರಿಸರ ಸಂರಕ್ಷಣೆ ಯಲ್ಲಿ ವಿದ್ಯಾರ್ಥಿಗಳ ಪಾತ್ರ ಬಹುಮಾನದ ಮೊತ್ತ 2000 ರೂ. ಗಳು ಮತ್ತು ಪ್ರಶಸ್ತಿ ಪತ್ರ ಪಡೆದಿದ್ದಾಳೆ . ಇವಳಿಗೆ ಆಡಳಿತ ಮಂಡಳಿಯು ಹಾಗೂ ಶಾಲೆಯ ಮುಖ್ಯೋಪಾಧ್ಯಾಯಿನಿ ಹಾಗೂ ಶಿಕ್ಷಕರು ಅಭಿನಂದನೆ ಸಲ್ಲಿಸಿದ್ದಾರೆ.

## ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ವಿಜೇತರಾದ ಗುರುಬಸಮ್ಮ ವಿ.ಚಿಗಟೇರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳು



## ಗುರುಬಸಮ್ಮ ವಿ. ಚಿಗಟೇರಿ ಹಿರಿಯ ಪ್ರಾಥಮಿಕ ಶಾಲೆ ಆಂಗ್ಲಮಾಧ್ಯಮದ ಪ್ರತಿಭಾ ಕಾರಂಜಿ ವಿಜೇತ ಮಕ್ಕಳು




ದಿನಾಂಕ :೧೮/೧೧/೨೦೨೫ ರಂದು ನಡೆದ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಗುರುಬಸಮ್ಮ ವಿ. ಚಿಗಟೇರಿ ಹಿರಿಯ ಪ್ರಾಥಮಿಕ ಶಾಲೆ ಆಂಗ್ಲಮಾಧ್ಯಮದ ಮಕ್ಕಳು ಭಾಗವಹಿಸಿ ಕ್ರಮವಾಗಿ ಪ್ರಥಮ ಬಹುಮಾನ ೪ ದ್ವಿತೀಯ ಬಹುಮಾನ ೩ , ತೃತೀಯ ಬಹುಮಾನ ೨ ಪಡೆದು ಕೊಂಡಿರುತ್ತಾರೆ. ಹಾಗೂ ತಾಲ್ಲೂಕು ಮಟ್ಟದಲ್ಲಿ ಪ್ರಥಮ ಬಹುಮಾನ ಪಡೆದ ವಿದ್ಯಾರ್ಥಿಗಳು ಮಾತ್ರ ಭಾಗವಹಿಸುತ್ತಾರೆ. ಈ ಸ್ಪರ್ಧೆಗಳಿಗೆ ಭಾಗವಹಿಸಿ ಬಹುಮಾನ ಪಡದ ಎಲ್ಲಾ ಮಕ್ಕಳಿಗೆ ಶಾಲಾ ಮುಖ್ಯಸ್ಥರು, ಶಿಕ್ಷಕರು, ಶೈಕ್ಷಣಿಕ ಸಲಹೆಗಾರರು ಹಾಗೂ ಶಾಲಾ ಆಡಳಿತ ಮಂಡಳಿಯವರು ಶುಭ ಹಾರೈಸಿದ್ದಾರೆ.

# ರಿಮೋಟ್ ಕಂಟ್ರೋಲ್ ಹುಟ್ಟಿಕೊಂಡಿದ್ದು ಹೀಗೆ

೧೯೩೮ರಲ್ಲಿ ವಾರ್ನರ್ ಎಂಬ ಜರ್ಮನ್ ಸಂಶೋಧಕ ಮೊದಲ ಬಾರಿಗೆ ಬಣ್ಣದ ಟಿ.ವಿ.ಯನ್ನು ಕಂಡು ಹಿಡಿದನು. ಡ್ಯುಮಾಂಟ್ ಎಂಬ ಕಂಪನಿ ಮೊದಲಿಗೆ ಟಿ.ವಿ.ಗಳನ್ನು ಉತ್ಪಾದಿಸಲು ಪ್ರಾರಂಭಿಸಿದ ಕಂಪನಿ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಪೀಟರ್ ಗೋಲ್ಡ್ ಮಾರ್ಕ್ ಮಾರ್ಗದರ್ಶನದಲ್ಲಿ ಬೈರ್ಡ್ ತಂತ್ರಜ್ಞಾನವನ್ನು ಬಳಸಿಕೊಂಡು ಪೂರ್ಣ ಪ್ರಮಾಣದ ಬಣ್ಣದ ಟಿ.ವಿ. ೧೯೪೦ರಲ್ಲಿ ತಯಾರಾಯಿತು.೧೯೪೮ರ ಹೊತ್ತಿಗೆ ಅಮೇರಿಕಾದಲ್ಲಿ ಹತ್ತು ಲಕ್ಷಕ್ಕೂ ಅಧಿಕ ಟಿ.ವಿ.ಗಳು ಮಾರಾಟ ವಾಗಿದ್ದವು. ಇಂದಿನ ಕೇಬಲ್ ಟಿ.ವಿ. ತಂತ್ರಜ್ಞಾನವನ್ನು ಕಂಡು ಹಿಡಿದ ಕೀರ್ತಿ ಪೆನ್ಸಲೇನಿಯಾದ ಮೌಂಟೆನ್ಸ್ ಕಂಪನಿಗೆ ಸೇರುತ್ತದೆ. ಪೆನ್ಸಲೇನಿಯಾದ ಸರ್ವಿಸ್ ಇಲೆಕ್ಟ್ರಿಕ್ ಕಂಪನಿಯ ವಾಲ್ಸನ್ ಹಾಗೂ ಆತನ ಹೆಂಡತ ಮಾರ್ಗರೇಟ್ ಮೊದಲ ಬಾರಿಗೆ ಕೇಬಲ್ ಟಿ.ವಿ.ಯನ್ನು ಕಂಡುಹಿಡಿದನು. ಜಿನೆತ್ ಕಾರ್ಪೋರೇಷನ್ ೧೯೫೦ರಲ್ಲಿ ರೀಮೋಟ್ ಕಂಟ್ರೋಲ್ ಟಿ.ವಿ.ಯನ್ನು ಕಂಡು ಹಿಡಿದರು. ಈ ಕಂಪನಿಯ ಸಂಸ್ಥಾಪಕ ಎಫ್ ಮ್ಯಾಕ್ ಡೋನಾಲ್ಡ್ ಮುಂದೊಂದು ದಿನ ಜಾಹೀರಾತುಗಳು ಟಿ.ವಿ.ಯನ್ನು ಆಳಲಿವೆ. ಈ ಜಾಹೀರಾತುಗಳಿಂದ ತಪ್ಪಿಸಿಕೊಳ್ಳಲು ಏನಾದರೊಂದು ಸಾಧನವೊಂದನ್ನು ಕಂಡು ಹಿಡಿಯಲೇಬೇಕೆಂದು ತನ್ನ ನೌಕರರಿಗೆ ಹೇಳುತ್ತಿದ್ದನು. ಇದರ ಫಲವಾಗಿ ರಿಮೋಟ್ ಕಂಟ್ರೋಲ್ ಹುಟ್ಟಿಕೊಂಡಿತು. ಪೂರ್ಣ ಪ್ರಮಾಣದ ರಿಮೋಟ್ ಕಂಟ್ರೋಲನ್ನು ಕಂಡು ಹಿಡಿದ ಕೀರ್ತಿ ಜೆನೆತ್ ಕಂಪನಿಯ ಇಂಜಿನಿಯರ್ ಉಜಿನ ಪೊಲಿಗೆ ಸಲ್ಲುತ್ತದೆ.

ಸಂಗ್ರಹ : ವಿಜಯವಾಣಿ ಪತ್ರಿಕೆ

ನಿರ್ಮಲ ಎಂ. ಸಹಶಿಕ್ಷಕಿ ಜಿ.ವಿ.ಸಿ.ಹೆಚ್.ಪಿ.ಎಸ್. (ಕ.ಮಾ.)

# ಶಿವಣ್ಣ ಚಿಗಟೇರಿ ಶಿಶುವಿಹಾರದ ಚಿತ್ರಪಟಗಳು





